KAKB320002612020

Presented on : 08-07-2020
Registered on : 08-07-2020
Decided on : 06-03-2026
Duration : 05 years/ 07 months/ 26 days.

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಅಫಜಲಪೂರ.**

**ಉಪಸ್ಥಿತರುಃ**
**ಶ್ರೀ ಅನಿಲ ಅಮಾತೆ**
ಬಿ.ಎ.ಎಲ್.ಎಲ್.ಬಿ. (Hon's).,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಅಫಜಲಪೂರ.

**ಸಿ.ಸಿ.ನಂ.156/2020**

ದಿನಾಂಕಃ 06ನೇ ಮಾರ್ಚ -2026 ರಂದು

**ಫಿರ್ಯಾದಿದಾರರುಃ**

(ಕರ್ನಾಟಕ ರಾಜ್ಯ ಅಫಜಲಪೂರ ಪೊಲೀಸರಿಂದ)
**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ -**

ಆರೋಪಿ/ತರುಃ

ವಿಠಲ್ ತಂದೆ ಷಣ್ಮುಖಪ್ಪ ಸುರಗಳ್ಳಿ,
50 ವರ್ಷ, ಉಃಟ್ರಾಕ್ಟರ ಚಾಲಕ ಮತ್ತು ಮಾಲೀಕ,
ವಾಸಃ ಶೀವೂರ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

(ಆರೋಪಿತನ ಪರ ಶ್ರೀ ಎಸ್.ಎಸ್.ಪಾಟೀಲ್. ವಕೀಲರು)

| | | | |
|---|---|---|---|
| 1. | ಪ್ರಕರಣ ನಡೆದ ದಿನಾಂಕ | : | 04.12.2019 |
| 2. | ಪ್ರಕರಣ ದಾಖಲಾದ ದಿನಾಂಕ | : | 05.12.2019 |
| 3. | ಆರೋಪಿತನನ್ನು ಬಂಧಿಸಿದ ದಿನಾಂಕ | : | -- |
| 4. | ಫಿರ್ಯಾದಿದಾರರ ಹೆಸರು | : | ಮೋದಿನ ಭಾಗವಾನ ಕಂದಾಯ ನಿರೀಕ್ಷಕರು. |

| | | | |
|---|---|---|---|
| 5. | ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ | : | 29.05.2024 |
| 6. | ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ | : | 16.10.2025 |
| 7. | ಅಪಾದನೆಗಳು | : | ಭಾ.ದಂ.ಸಂ.ಕಲಂ. 379 ರಡಿಯಲ್ಲಿ |
| 8. | ನ್ಯಾಯಾಧೀಶರ ತೀರ್ಮಾನ | : | ಅಂತಿಮ ಆದೇಶದಂತೆ |

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಅಫಜಲಪೂರ.

**ತೀರ್ಪು**

ಆರಕ್ಷಕ ಉಪನಿರೀಕ್ಷಕರು, ಅಫಜಲಪೂರ ಪೊಲೀಸ್ ಠಾಣೆ, ಅಫಜಲಪೂರ ಇವರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆಃ-**

ದಿನಾಂಕಃ 04.12.2019 ರಂದು ರಾತ್ರಿ 11-30 ಗಂಟೆ ಸಮಯದಲ್ಲಿ ಅಫಜಲಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಶಿವೂರ ಕ್ರಾಸ್ ಹತ್ತಿರ ಕರಜಗಿ-ಮಣ್ಣೂರ ಮುಖ್ಯ ರೋಡಿನ ಮೇಲೆ ಆರೋಪಿತನು AZVSG72243853 ಮತ್ತು ಇಂಜಿನ್ ನಂ.3105ELU83C714712F20 (ಕೆಎ-28-ಟಿಡಿ-2944) ನೇದ್ದರ ಟ್ರ್ಯಾಕ್ಟರನಲ್ಲಿ

ಯಾವುದೇ ದಾಖಲಾತಿ ಇಲ್ಲದೆ ಕಳ್ಳತನದಿಂದ ಮರಳು ಸಾಗಿಸುತಿದ್ದಾನೆಂದು ಸದರಿ ಆರೋಪಿತನ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಅಫಜಲಪೂರ ಪೊಲೀಸರು ತಮ್ಮ ಠಾಣಾ ಗುನ್ಹಾ ನಂ.207/2019 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತನ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ. 379 ರಡಿಯಲ್ಲಿನ ಶಿಕ್ಷಾರ್ಹ ಅಪರಾಧದಿಂದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ದೋಷಾರೋಪಣೆ ಪತ್ರ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತನ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತನ ಹಾಜರಾತಿಯನ್ನು ಪಡೆಯಲಾಯಿತು. ನಂತರ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತನಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ. 379 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿತನಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತನ ವಿರುದ್ದ ಆಪಾದನೆಗಳನ್ನು ಸಾಬೀತು ಪಡಿಸುವ ಸಲುವಾಗಿ ಒಟ್ಟು 04 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 4 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ರಿಂದ 07 ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಯಾದ ನಂತರ ಅ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತನು ತಮ್ಮ ಪರವಾಗಿ ಸಾಕ್ಷಿ ವಿಚಾರಣೆಗೆ ಮುಂದಾಗಿರುವುದಿಲ್ಲ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

7. ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ

**ಅಂಶಗಳು**

1. ದಿನಾಂಕಃ 04.12.2019 ರಂದು ರಾತ್ರಿ 11-30 ಗಂಟೆ ಸಮಯದಲ್ಲಿ ಅಫಜಲಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಶಿವೂರ ಕ್ರಾಸ್ ಹತ್ತಿರ ಆರೋಪಿತನು ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಪರವಾನಿಗೆ ಪಡೆದುಕೊಳ್ಳದೆ ಸೋನಾಲಿಕ ಕಂಪನಿಯ AZVSG72243853 ಮತ್ತು ಇಂಜಿನ್ ನಂ.3105ELU83C714712F20 (ಕೆಎ-28-ಟಿಡಿ-2944) ನೇದ್ದರ ಟ್ರ್ಯಾಕ್ಟರನಲ್ಲಿ ಅಪ್ರಮಾಣಿಕವಾಗಿ ಅಕ್ರಮ ಲಾಭ ಹೊಂದುವ ಉದ್ದೇಶದಿಂದ ಕಳ್ಳತನದಿಂದ ಮರಳು ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದನು, ಆ ಮೂಲಕ ಭಾ.ದಂ.ಸಂ.ಕಲಂ. 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಯಾವ ಆದೇಶ ಅಥವಾ ಶಿಕ್ಷೆ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 : ನಕರಾತ್ಮಕವಾಗಿ.

ಅಂಶ ನಂ.2: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

**<u>ಕಾ ರ ಣ ಗ ಳು</u>**

9. **<u>ಅಂಶ ನಂ.1</u>:-** ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯ ನಿರ್ದಿಷ್ಟ ಆರೋಪವೇನೆಂದರೆ, 04.12.2019 ರಂದು ರಾತ್ರಿ 11-30 ಗಂಟೆ ಸಮಯದಲ್ಲಿ ಅಫಜಲಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಶಿವೂರ ಕ್ರಾಸ್ ಹತ್ತಿರ ಕರಜಗಿ-ಮಣ್ಣೂರ ಮುಖ್ಯ ರೋಡಿನ ಮೇಲೆ ಆರೋಪಿತನು AZVSG72243853 ಮತ್ತು ಇಂಜಿನ್ ನಂ.3105ELU83C714712F20 (ಕೆಎ-28-ಟಿಡಿ-2944) ನೇದ್ದರ ಟ್ರ್ಯಾಕ್ಟರನಲ್ಲಿ ಯಾವುದೇ ದಾಖಲಾತಿ ಇಲ್ಲದೆ ಕಳ್ಳತನದಿಂದ ಮರಳು ಸಾಗಿಸುತಿದ್ದಾನೆಂದು ಸದರಿ ಆರೋಪಿತನ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ. ಟ್ರ್ಯಾಕ್ಟರನಲ್ಲಿ ಅನಧಿಕೃತವಾಗಿ ಮರಳನ್ನು ತುಂಬಿಕೊಂಡು ಸಾಗಾಣಿಕೆ ಮಾಡಿರುತ್ತಾರೆಂದು ಭಾ.ದಂ.ಸಂ.ಕಲಂ.379 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದಾಗಿ ಆರೋಪಿಸಿದ್ದು, ಸದರಿ ಆರೋಪದ ಅನುಸಾರ ಆರೋಪಿ ಹಾಜರಾತಿ ಪಡೆದ ನಂತರ. ಆರೋಪಿತನಿಗೆ ದೋಷಾರೋಪಣೆಯನ್ನು ಓದಿ ಹೇಳಿದಾಗ, ಆರೋಪಿತನು ತಾವು ತಪ್ಪು ಮಾಡಿಲ್ಲವೆಂದು ಅಭಿಯೋಜನೆಯವರು ಮಾಡಿದ ಆಪಾದನೆಯು ಅಲ್ಲಗಳೆದಿರುತ್ತಾರೆ. ಕಾನೂನಿಡಿಯಲ್ಲಿ ಲಭ್ಯವಿರುವ ಪೂರ್ವಭಾವನೆ ಏನೆಂದರೆ ಅಭಿಯೋಜನೆಯವರು

ಆರೋಪಿತನ ಮೇಲೆ ಮಾಡಿದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವವರೆಗೆ ಆರೋಪಿತನನ್ನು ಮುಗ್ದನೆಂದು ಪೂರ್ವಭಾವನೆ ತಳೆಯಬೇಕು ಎಂಬುದಾಗಿ ಆರೋಪಿತನ ವಿರುದ್ದ ಮಾಡಲಾದ ಆರೋಪವನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಾಸಾ-1 ರಿಂದ 4 ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ.

10. ಪ್ರಕರಣದ ಗುನ್ನೆ ಸ್ಥಳದ ಪಂಚ ಸಾಕ್ಷಿದಾರರಾದ ನೀಲಪ್ಪ ತಂದೆ ಶೇಟ್ವೆಪ್ಪ ಜಮಾದಾರ ಗ್ರಾಮ ಸಹಾಯಕ ಇವರನ್ನು ಚಾಸಾ-2 ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಲಾಯಿತು. ಪ್ರಾಸಾ-1 ರವರ ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳುವುದೇನೆಂದರೆ, ಚಾಸಾ-1 ಮತ್ತು 4 ರವರ ಪರಿಚಯ ಇರುತ್ತದೆ. ತಾನು ಶಿವೂರ ಗ್ರಾಮದಲ್ಲಿ ಗ್ರಾಮ ಸಹಾಯಕ ಕೆಲಸ ನಿರ್ವಹಿಸುತ್ತಿದ್ದಾಗ ತಮ್ಮ ಗ್ರಾಮ ಲೆಕ್ಕಾಧಿಕಾರಿಗಳ ಆದೇಶದ ಮೇರೆಗೆ ದಿನಾಂಕಃ 05.12.2019 ರಂದು ರಾತ್ರಿ 11-30 ಗಂಟೆಗೆ ಶಿವೂರ ಕ್ರಾಸ ಹತ್ತಿರ ಮರಳು ಸಾಗಾಣಿಕೆ ನಡೆಯುತ್ತಿದ್ದು, ಅದಕ್ಕೆ ತನಗೆ ಬರುವಂತೆ ಆದೇಶಿಸಿರುತ್ತಾರೆಂದು ಹಾಗೂ ತಾನು, ಚಾಸಾ-1, 3 ರವರು ಸೇರಿಕೊಂಡು ಶಿವೂರ ಕ್ರಾಸ ಹತ್ತಿರ ಹೋಗಿರುತ್ತೇವೆಂದು ಹಾಗೂ ಆ ನಂತರ ಅಲ್ಲಿ ಬರುತ್ತಿದ್ದ ಮರಳು ತುಂಬಿದ ಒಂದು ಟ್ರ್ಯಾಕ್ಟರನ್ನು ನಿಲ್ಲಿಸಿ ವಿಚಾರಿಸಿ, ಮಾಶಾಳದ ಪೋಲಿಸ ಹೊರವಲಯದ ಕಚೇರಿಗೆ ಟ್ರ್ಯಾಕ್ಟರನ್ನು ತೆಗೆದುಕೊಂಡು ಹೋಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

11. ಈ ಪ್ರಕರಣದ ಗುನ್ನೆ ಸ್ಥಳದ ಪಂಚ ಸಾಕ್ಷಿದಾರರಾದ ಮಹ್ಮದ ತಂದೆ ಖಾಧೀರಸಾಬ ಮುಲ್ಲಾ ಗ್ರಾಮ ಲೆಕ್ಕಿಗ, ಇವರನ್ನು ಚಾಸಾ-3 ಪ್ರಾಸಾ-2 ಎಂದು ವಿಚಾರಣೆಗೆ

ಒಳಪಡಿಸಲಾಯಿತು. ಪ್ರಾಸಾ-2 ರವರ ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳುವುದೇನೆಂದರೆ, ದಿನಾಂಕಃ 04.12.2019 ರಂದು ಮಾನ್ಯ ತಹಸೀಲ್ದಾರ ರವರ ಮೌಖಿಕ ಆದೇಶದ ಮೇರೆಗೆ ತಾನು ಹಾಗೂ ಚಾಸಾ-1 ರವರು ಕೂಡಿಕೊಂಡು ಶಿವೂರ ಕ್ರಾಸ ಹತ್ತಿರ ಗಸ್ತು ಕರ್ತವ್ಯಕ್ಕೆ ಹೋಗಿದ್ದು ಆ ನಂತರ ಚಾಸಾ-2 ರವರು ಘಟನಾ ಸ್ಥಳಕ್ಕೆ ಬರಲು ತಿಳಿಸಿದ್ದು, ಅದೇ ದಿನ ರಾತ್ರಿ 10-30 ರಿಂದ 11-00 ಗಂಟೆ ಕಾಲ ಗಸ್ತು ಕರ್ತವ್ಯದಲ್ಲಿದ್ದಾಗ ಶಿವೂರ ಗ್ರಾಮದಿಂದ ಒಂದು ಟ್ರ್ಯಾಕ್ಟರ ಮರಳು ತುಂಬಿಕೊಂಡು ಬರುವುದನ್ನು ನೋಡಿರುವುದಾಗಿ ಆ ನಂತರ ತಾನು ಹಾಗೂ ಚಾಸಾ-1 ರವರು ಸೇರಿ ಟ್ರ್ಯಾಕ್ಟರ ಚಾಲಕನಿಗೆ ಟ್ರ್ಯಾಕ್ಟರ ನಿಲ್ಲಿಸಲು ಸೂಚಿಸಿದ್ದು, ಆಗ ಚಾಲಕ ಸದರಿ ಆರೋಪಿತನು ಟ್ರ್ಯಾಕ್ಟರ ನಿಲ್ಲಿಸಿ ಇಳಿದು ಓಡಿ ಹೋಗಿರುವುದಾಗಿ ಆ ನಂತರ ತಾನು, ಚಾಸಾ-1 ಮತ್ತು ಚಾಸಾ-2 ರವರು ಸೇರಿಕೊಂಡು ರಾತ್ರಿ 11-30 ರಿಂದ 12-30 ರ ವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ಪಂಚನಾಮೆಯನ್ನು ಶಿವೂರ ಮತ್ತು ಕರಜಗಿ ಕ್ರಾಸ ಬಳಿ ಮಾಡಿದ್ದು, ಪಂಚನಾಮೆ ಮಾಡುವ ಸಮಯದಲ್ಲಿ ಟ್ರ್ಯಾಕ್ಟರಗೆ ನೋಂದಣಿ ನಂಬರ ಇರಲಿಲ್ಲ, ಆದ್ದರಿಂದ ಟ್ರ್ಯಾಕ್ಟರನ ಛೆಸ್ಸಿ ಮತ್ತು ಇಂಜಿನ ನಂಬರ ಬರೆದುಕೊಂಡಿರುವುದಾಗಿ ನಂತರ ತಾನು ಸದರಿ ಪಂಚನಾಮೆಗೆ 2ನೇ ಪಂಚನಾಮೆ ಸಹಿ ಮಾಡಿರುತ್ತೇನೆಂದು ಹಾಗೂ ಆ ನಂತರ ತಾನು ಹಾಗೂ ಚಾಸಾ-1 ರವರು ಸೇರಿಕೊಂಡು ಸದರಿ ಟ್ರ್ಯಾಕ್ಟರನ್ನು ಪೋಲಿಸರ ಸುಪ್ರದ್ದಿಗೆ ನೀಡಿರುವುದಾಗಿ ದಿನಾಂಕಃ 16.01.2020 ರಂದು ಪೋಲಿಸರು ತನ್ನನ್ನು ಠಾಣೆಗೆ ಕರೆಯಿಸಿ ಸದರಿ ಟ್ರ್ಯಾಕ್ಟರಿನ ನೋಂದಣಿ ನಂಬರನ್ನು ತಿಳಿಸಿದ್ದು, ಅದು ಕೆಎ-28-ಟಿಡಿ-2944 ಎಂದು ಇರುತ್ತದೆ. ಆ ನಂತರ ಟ್ರ್ಯಾಕ್ಟರನ ಮಾಲೀಕ ಸದರಿ

ನ್ಯಾಯಾಲಯದ ಮುಂದೆ ಇರುವ ಆರೋಪಿ ಎಂದು ಗುರುತ್ತಾಗಿರುವುದಾಗಿ ತಾನು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

12. ಈ ಪ್ರಕರಣದ ಫಿರ್ಯಾದಿ ಸಾಕ್ಷಿದಾರರಾದ ಮೋದಿನ ಸಾಬ ತಂದೆ ಮೆಹಬೂಬಸಾಬ ಭಾಗವಾನ ಕಂದಾಯ ನಿರೀಕ್ಷಕರು ಕರಜಗಿ, ಇವರನ್ನು ಚಾಸಾ-1 ಪ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಲಾಯಿತು. ಪ್ರಾಸಾ-3 ರವರ ತಮ್ಮ ಸಾಕ್ಷ್ಯದಲ್ಲಿ ತಹಶೀಲದ್ದಾರ ಅಫಜಲಪೂರ ರವರು 4ನೇ ತಾರೀಖಿನಂದು ಪೋನ್ ಮಾಡಿ ಅನಧಿಕೃತವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆಂದು ಹಾಗೂ ಅದರಂತೆ ತಾವು ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಸೇವಕ ಶಿವಪೂರು ನಾವೆಲ್ಲಾ ಜಂಟಿಯಾಗಿ ಗಸ್ತು ಕರ್ತವ್ಯದಲ್ಲಿದ್ದಾಗ ಒಂದು ಮರಳು ತುಂಬಿಕೊಂಡ ಟ್ರ್ಯಾಕ್ಟರ ಹೋಗುತ್ತಿದ್ದು, ಸದರಿ ಟ್ರ್ಯಾಕ್ಟರನ್ನು ಕೈ ಮಾಡಿ ನಿಲ್ಲಿಸಿದಾಗ ಸದರಿ ಟ್ರ್ಯಾಕ್ಟರಿನ ಆರೋಪಿ ಚಾಲಕನು ಟ್ರ್ಯಾಕ್ಟರನ್ನು ನಿಲ್ಲಿಸಿ ಓಡಿ ಹೋಗಿರುತ್ತಾನೆಂದು ತದನಂತರ ತಾನು, ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಸೇವಕ ಎಲ್ಲರೂ ಸೇರಿ ಪಂಚನಾಮೆಯನ್ನು ಬರೆದುಕೊಂಡು ತದನಂತರ ಮಾಶಾಳದ ಹೊರವಲಯ ಪೋಲಿಸ ಠಾಣೆಗೆ ಸದರಿ ಟ್ರ್ಯಾಕ್ಟರನ್ನು ಪೋಲಿಸರ ವಶಕ್ಕೆ ನೀಡಿ ದಿನಾಂಕಃ 05.12.2019 ರಂದು ಪೋಲಿಸ ಠಾಣೆಗೆ ಹೋಗಿ ನಿಶಾನೆ ಪಿ-6 ರಂತೆ ದೂರು ನೀಡಿರುವುದಾಗಿ ದಿನಾಂಕಃ 16.01.2020 ರಂದು ಟ್ರ್ಯಾಕ್ಟರಿನ ಮಾಲಕನು ನ್ಯಾಯಾಲಯದ ಆದೇಶ ಪಡೆದು ಒಬ್ಬ ಜಾಮೀನುದಾರನೊಂದಿಗೆ ಟ್ರ್ಯಾಕ್ಟರ ಬಿಡಿಸಲು ಬಂದಾಗ ಸದರಿ ಟ್ರ್ಯಾಕ್ಟರಿನ ಮಾಲಕನನ್ನು ನೋಡಿ ಗುರುತಿಸಿರುವುದಾಗಿ ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

13. ಈ ಪ್ರಕರಣದ ಮರಳು ಸ್ವೀಕರಿಸಿ ಮೌಲ್ಯ ಮಾಪನ ಕೊಟ್ಟವರು ಸಾಕ್ಷಿದಾರರಾದ ವಿಜಯಕುಮಾರ ತಂದೆ ಬಸವಣಪ್ಪ ನಿವೃತ್ತ AEE PWD ಇವರನ್ನು ಚಾಸಾ-4 ಪ್ರಾಸಾ-4 ಎಂದು ವಿಚಾರಣೆಗೆ ಒಳಪಡಿಸಲಾಯಿತು. ಪ್ರಾಸಾ-4 ರವರ ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 17.12.2019 ರಂದು ಅಫಜಲಪೂರ ಪೋಲಿಸ ಠಾಣೆಯಿಂದ ಒಂದು ಕೋರಿಕೆ ಪತ್ರ ಬಂದಿದ್ದು ಸದರಿ ಕೋರಿಕೆ ಪತ್ರದಲ್ಲಿ ಜಪ್ತಿಪಡಿಸಿಕೊಂಡ ಮರಳಿನ ಅಳತೆ ಮಾಡಿಕೊಡಲು ಕೇಳಿಕೊಂಡಿದ್ದು ಸದರಿಯವರ ಕೋರಿಕೆಯಂತೆ ಜಪ್ತಿಪಡಿಸಿಕೊಂಡ ಮರಳಿನ ಅಳತೆ ಕಾರ್ಯ ಮಾಡಿರುತ್ತೇನೆಂದು ಹಾಗೂ 1 ಕ್ಯೂಬಿಕ ಮೀಟರ ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

14. ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ 4 ರವರು ಅಧಿಕಾರಿ ವರ್ಗದ ಸಾಕ್ಷಿದಾರರಾಗಿರುತ್ತಾರೆ. ಈ ಪ್ರಕರಣದ ಗುನ್ನೆ ಸ್ಥಳದ ಪಂಚನಾಮೆ ಸಾಕ್ಷಿದಾರರಾದ ಪ್ರಾಸಾ-1 ರವರು ಈ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಹೇಳಿಕೆಯನ್ನು ನುಡಿದಿರುತ್ತಾರೆ. ಈ ಪ್ರಕರಣದ ತನಿಖಾಧಿಕಾರಿಯವರು ಗುನ್ನೆ ಸ್ಥಳದ ಸುತ್ತಮುತ್ತಲಿನ ಮತ್ತು ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆಯನ್ನು ಪಡೆದು ಸಾಕ್ಷ್ಯ ನುಡಿಸಿರುವುದಿಲ್ಲ. ಜಪ್ತಿಪಡಿಸಿಕೊಂಡರು ಎಂದು ಹೇಳುವ ಮತ್ತು ಮರಳು ಸಾಗಿಸುತ್ತಿದ್ದ ಟ್ರ್ಯಾಕ್ಟರಿನ ಕುರಿತು ಯಾವುದೇ ಸಾಕ್ಷ್ಯವು ಲಭ್ಯವಿರುವುದಿಲ್ಲ. ಮರಳಿನ ವಿಲೇವರಿ ಕುರಿತು ಯಾವುದೇ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಈ ದೋಷಾರೋಪಣೆಯ ಪಟ್ಟಿಯಲ್ಲಿ ಸಲ್ಲಿಸಿದ ಟ್ರ್ಯಾಕ್ಟರಿನ ಭಾವ ಚಿತ್ರಗಳನ್ನು ನಿಶಾನೆ ಪಿ-2 ರಿಂದ 5 ಎಂದು ಗುರುತಿಸಲಾಗಿದ್ದು ಅವುಗಳನ್ನು ಗಮನಿಸಿದಾಗ, ಟ್ರ್ಯಾಕ್ಟರನಲ್ಲಿ ಮರಳು ಇರುವುದಿಲ್ಲ ಮತ್ತು ಸದರಿ ಭಾವ

ಚಿತ್ರಗಳನ್ನು ಪೋಲಿಸ್ ಠಾಣೆಯ ಆವರಣದಲ್ಲಿ ತೆಗೆಯಲಾಗಿದ್ದು, ಗುನ್ನೆ ಸ್ಥಳದ ಕುರಿತು ಮತ್ತು ಅದರಲ್ಲಿ ಮರಳು ಸಾಗಾಟ ಮಾಡುಲಾಗುತ್ತಿತ್ತು ಎಂಬುದನ್ನು ರುಜುವಾತುಪಡಿಸಲು ಸಾಧ್ಯವಾಗಿರುವುದಿಲ್ಲ. ದಾಳಿ ಮಾಡಿದ ಅಧಿಕಾರಿಗಳು ಕಂದಾಯ ಇಲಾಖೆಗೆ ಸಂಬಂಧಿಸಿದವರಾಗಿದ್ದು ಸದರಿಯವರು ಎಂ.ಎಂ.ಆರ್.ಡಿ. ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಖಾಸಗಿ ದೂರನ್ನು ಯಾಕೆ ಸಲ್ಲಿಸಿರುವುದಿಲ್ಲ ಎಂಬುದನ್ನು ತಿಳಿಸಿರುವುದಿಲ್ಲ. ಮತ್ತು ಜಪ್ತಿಪಡಿಸಿಕೊಂಡರೆಂದು ಹೇಳುವ ಮರಳಿನ ಕುರಿತು ಯಾವುದೇ ಭಾವ ಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ. ಅದರಂತೆ ಅದರ ವಿಲೇವರಿ ಕುರಿತು ಏನು ತಿಳಿಸಿರುವುದಿಲ್ಲ. ಮುಂದುವರೆದು ಈ ಪ್ರಕರಣದ ತನಿಖಾಧಿಕಾರಿಯು ಮರಳನ್ನು ಆರೋಪಿತನು ಭೀಮಾ ನದಿಯ ಯಾವ ಭಾಗದಿಂದ ಮತ್ತು ಯಾವುದರೂ ಸಹಾಯದಿಂದ ಮರಳನ್ನು ಈ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಟ್ರ್ಯಾಕ್ಟರನಲ್ಲಿ ಭರ್ತಿ ಮಾಡಿದ್ದರೂ ಎಂಬುದನ್ನು ತೋರಿಸಲು ವಿಫಲರಾಗಿರುತ್ತಾರೆ.

15. ಸದರಿ ಪ್ರಾಸಾ-1 ರಿಂದ 4 ರವರು ಅಧಿಕಾರಿ ವರ್ಗದ ಸಾಕ್ಷಿದಾರರು ಮತ್ತು ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿರುತ್ತಾರೆ. ಆರೋಪಿತನ ವಿರುದ್ದ ಆಪಾದನೆಯನ್ನು ರುಜುವಾತುಪಡಿಸಲು ಯಾವುದೇ ಪ್ರತ್ಯಕ್ಷ ಸಾಕ್ಷಿಯನ್ನು ಸಾಕ್ಷ್ಯ ಮಾಡಿಸಿರುವುದಿಲ್ಲ. ಪ್ರಾಸಾ-1 ರಿಂದ 4 ರವರು ಅಭಿಯೋಜನೆಗೆ ಪೂರಕವಾಗದ ಸಾಕ್ಷಿ ನುಡಿದಿದ್ದರೂ ಸಹ ಸದರಿಯವರ ಸಾಕ್ಷಿಯನ್ನು ಪುಷ್ಠಿಕರಿಸಲು, ನಂಬಲು ಸ್ವತಂತ್ರ ಮತ್ತು ಪ್ರತ್ಯಕ್ಷ ಸಾಕ್ಷಿಗಳ ಕೊರತೆ ಇರುತ್ತದೆ.

16. ಆದ್ದರಿಂದ ಸದರಿ ಪ್ರಾಸಾ-1 ರಿಂದ 4 ರವರು ಅಧಿಕಾರಿ ವರ್ಗದ ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿದ್ದರಿಂದ ಮತ್ತು ಸದರಿಯವರ ಹೇಳಿಕೆಗಳನ್ನು ಪುಷ್ಠಿಕರಿಸುವ ಸಾಕ್ಷ್ಯಗಳು ಅಲಭ್ಯ ಇರುವುದರಿಂದ ಸದರಿಯವರ ಸಾಕ್ಷಿ ಹೇಳಿಕೆಗಳನ್ನು ಸಂಶಯಾತೀತವಾಗಿ ನಂಬಲು ಅರ್ಹರಾಗಿರುವುದಿಲ್ಲ.

17. ಆದ್ದರಿಂದ ಅಭಿಯೋಜನೆಯು ಆರೋಪಿತನು ಸರಕಾರದ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಕಳ್ಳತನದಿಂದ ಮರಳು ಸಾಗಣಿಕೆ ಮಾಡುತ್ತಿದ್ದನೆಂದು ಆರೋಪಿತನ ಕೃತ್ಯವನ್ನು ರುಜುವಾತುಪಡಿಸಲು ಸೂಕ್ತ ಸಾಕ್ಷ್ಯಾಧಾರಗಳ ಕೊರತೆಯ ಲಾಭವನ್ನು ಆರೋಪಿತನಿಗೆ ನೀಡುತ್ತಾ ಅಂಶ-1ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

18. **ಅಂಶ ನಂ.2** :- ಅಂಶ ನಂ.1ನ್ನು ನಕಾರಾತ್ಮಕ ಎಂದು ಉತ್ತರಿಸಿರುವುದರಿಂದ ಈ ಕೆಳಕಂಡ ಆದೇಶ ಮಾಡಲಾಗಿರುತ್ತದೆ.

**ಆ ದೇ ಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ನಿರ್ದೋಷಿಯೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತನನ್ನು ನ್ಯಾಯಾಲಯಕ್ಕೆ ಬರೆದುಕೊಟ್ಟ ವಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನುದಾರನು ಬರೆದುಕೊಟ್ಟ

ಮುಚ್ಚಳಿಕೆಯನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರನ್ವಯ ಇಂದಿನಿಂದ 6 ತಿಂಗಳವರೆಗೆ ಮುಂದುವರೆಸಲಾಗಿರುತ್ತದೆ.

ಅಂತಿಮ ದೋಷಾರೋಪಣಾ ಪಟ್ಟಿಯ ಕ್ರ.ಸಂ.11 ರಲ್ಲಿ ತೋರಿಸಿದ ಕೆಎ-28-/TD-2944 ನೇದ್ದರ ಟ್ರ್ಯಾಕ್ಟರನ್ನು ಅರ್ಜಿದಾರನ ಪರವಾಗಿ ಮಧ್ಯಂತರ ಕಬ್ಜೆ ನೀಡಿದ ಆದೇಶವನ್ನು ಈ ಮೂಲಕ ಖಾಯಂಗೊಳಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 06 ನೇ ಮಾರ್ಚ-2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಅನಿಲ ಅಮಾತೆ )**
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

## ಅನುಬಂಧ

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

ಪಿ.ಡಬ್ಲ್ಯೂ -1 : ನೀಲಪ್ಪ ತಂದೆ ಶೆಟ್ಟೆಪ್ಪ ಜಮಾದಾರ ಗ್ರಾಮ ಸಹಾಯಕ

ಪಿ.ಡಬ್ಲ್ಯೂ -2 : ಮಹ್ಮದ ತಂದೆ ಖಾಧೀರಸಾಬ ಮುಲ್ಲಾ ಗ್ರಾಮ ಲೆಕ್ಕಿಗ

ಪಿ.ಡಬ್ಲ್ಯೂ -3 : ಮೋದಿನಸಾಬ ತಂದೆ ಮೆಹಬೂಬು ಕಂದಾಯ ನಿರೀಕ್ಷಕರು

ಪಿ.ಡಬ್ಲ್ಯೂ -4 : ವಿಜಯಕುಮಾರ ತಂದೆ ಬಸವಣ್ಣಪ್ಪ ನಿವೃತ್ತ AEE PWD

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

ನಿ.ಪಿ.1 : ಜಪ್ತಿ ಪಂಚನಾಮೆ

ನಿ.ಪಿ.1 (ಎ) : ಪ್ರಾಸಾ-1 ರವರ ಸಹಿ.

| | | |
|---|---|---|
| ನಿ.ಪಿ.1 (ಬಿ) | : | ಪ್ರಾಸಾ-2 ರವರ ಸಹಿ. |
| ನಿ.ಪಿ.1 (ಸಿ) | : | ಪ್ರಾಸಾ-3 ರವರ ಸಹಿ. |
| ನಿ.ಪಿ.2 ರಿಂದ 5 | : | ಪಂಚನಾಮೆ ಕಾಲಕ್ಕೆ ತೆಗೆದ ಟ್ರ್ಯಾಕ್ಟರನ ಭಾವಚಿತ್ರಗಳು |
| ನಿ.ಪಿ.6 | : | ಪ್ರಾಸಾ-3 ರವರ ದೂರು |
| ನಿ.ಪಿ.6 (ಎ) | : | ಪ್ರಾಸಾ-3 ರವರ ಸಹಿ. |
| ನಿ.ಪಿ.7 | : | ಪ್ರಾಸಾ-4 ರವರ ಮರಳಿನ ಅಳತೆಯ ಮೌಲ್ಯ ಮಾಪನ ವರದಿ |
| ನಿ.ಪಿ.7 (ಎ) | : | ಪ್ರಾಸಾ-4 ರವರ ಸಹಿ. |

**ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿ ದಾರರ ಪಟ್ಟಿ**

- ಇಲ್ಲ -

**ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

- ಇಲ್ಲ -

**ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ**

- ಇಲ್ಲ -

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಅಫಜಲಪೂರ.

Visit **ecourts.gov.in** for updates or download mobile app "**eCourts Services**" from Android or iOS.